DOC-523
T-P-2

Reg no KRVN 12 ಶ್ರೀ – For Influential Publicity – 4-9-76

ಸತ್ಯವಾದಿ ಮಾತೋಕ್ತವ ನೆರವೇರಿಸಿ ವಜ್ರಮಹೋತ್ಸವನೇರವೇರಿಸಲಿರುವ ಕಥ್ರಿಕೆ

ಸತ್ಯವಾದಿ
SATYAVADI

60 th Diamond Jubilee Year
60 ನೇ ವಜ್ರಮಹೋತ್ಸವ ವರ್ಷ

★ Satyavadi Daily, Mysore 4 ★

ಸಂಸ್ಥಾಪಕರು : ಅರಮನೆ ನಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ (5 ಪೈಸೆ

ಮೈಸೂರು ನಗರ ಪೌರಸಭೆಯ ಕಮೀಷನರ್

ಶ್ರೀ ಸತಂತ್ರರಾವ್‌ರವರೆ ಗಮನಿಸಿ

ಈ ತಿಂಗಳು 6 ನೇ ತಾರೀಖು ಮೈಸೂರು ಲಷ್ಕರ್ ಮೊಹಲ್ಲದಲ್ಲಿ ಶುದ್ದೀಕರಣ ಕಾರ್ಯ ಇಟ್ಟುಕೊಂಡಿದೆ. ಆ ಮೊಹಲ್ಲದ ಇತ್ತ ಭಾಗದಲ್ಲಿ ಗಮನ ಕೊಡುವ ಅಗತ್ಯ ಇದೆ. ಅಶೋಕ ರಸ್ತೆಯ 4 ನೇ ಅಡ್ಡರಸ್ತೆ, ರೇಡಿಯಂಟ್ ಪತ್ರಿಕೆಯ ಸಂಪಾದಕ ಎಂ.ಎನ್ ಚಲುವಾಚಾರ್ಯರ ಮನೆ ಹಿಂಭಾಗದ ರಸ್ತೆ ವನುಷ್ಯ ವಾತ್ರರಿಗೆ ಸ್ಪೀತಿಯಾಗಲಾರದು ಮಲಮೂತ್ರ, ಮಳೆಬಂದರೆ ರಸ್ತೆಯಲ್ಲಿ ಜಾರುವುದು ಇವು ಅಲ್ಲಿ ಸರ್ವೆ ಸಾಮಾನ್ಯ ಇನ್ನು ಸ್ವಲ್ಪ ಮುಂದೆ ಹೋಗಿ ಬಲಕ್ಕೆ ನೋಡಿದರೆ ಅಲ್ಲಿ ಸಣ್ಣ ಓಣಿ. ಅತ್ತ ಮೂಗು ಹಾಕಿದರೆ ಮೂಗಿನ ಹೊಳ್ಳೆ ಒಡೆಯುವುದು.

ಕೋಟೆ ಮುಂದೆ ಅಳಿದ ಮಹಾಸ್ವಾಮಿಯವರಾದ ಶ್ರೀ ಚಾಮರಾಜ ಒಡೆಯರ್‌ರವರ ಪ್ರತಿಮೆ. ಅಲ್ಲಿಂದ ಅಳಿದ ಮಹಾಸ್ವಾಮಿಯವರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಪ್ರತಿಮೆಗೆ ಸಾಗುವ ವಕಾರ್ಗ. ಆ ರಸ್ತೆಯಲ್ಲಿ ಸ್ವಲ್ಪ ಮುಂದೆಹೋದರೆ ಎಡಗಡೆ ಪಾದಚಾರಿ ರಸ್ತೆಗೆ ಅಂಟಿದಂತೆ ಸಣ್ಣ ಹಳ್ಳ. ಒಳಚರಂಡಿ ವ್ಯವಸ್ಥೆಗೆ ಒಳಪಟ್ಟಿದ್ದೋ ಏನೋ ತಿಳಿಯದು ವೇಗವಾಗಿ ಬರುತ್ತಿದ್ದ ಬಾಲಕನೊಬ್ಬ ಮೊನ್ನೆ ಅರಿವಿಲ್ಲದೆ ಕಾಲಿಟ್ಟು ಮುಗ್ಗರಿಸಿದ ಮೂಳೆ ಗಟ್ಟಿಯಿತ್ತು ಮುರಿಯಲಿಲ್ಲ ಅದರೆ ನೋವಿನಿಂದ ಅತ್ತ.

★

ನ್ಯಾಯಮಟ್ಟಡಲ್ಲಡುವುದಾಗಿ ಭರವಸೆ

ನವ ದೆಹಲಿ — ಬಗುವ ಹಬ್ಬದ ಕಾಲದಲ್ಲಿ ಸಕ್ಕರೆ, ಬಟ್ಟೆ, ವನಸ್ಪತಿ ಇತ್ಯಾದಿ ಅವಶ್ಯಕ ಪದಾರ್ಥಗಳ ಬೆಲೆಯನ್ನು ನ್ಯಾಯಮಟ್ಟದಲ್ಲಿ ಇರಿಸುವುದಾಗಿ ವ್ಯಾಪಾರ ಮತ್ತು ಕೈಗಾರಿಕೆ ಪ್ರತಿನಿಧಿಗಳು ಒಪ್ಪಿದರು.

★

ಜನತಾ ನ್ಯಾಯಾಲಯಗಳ ವ್ಯವಸ್ಥೆ

ಬೆಂಗಳೂರು — ನ್ಯಾಯಾಂಗ ನೇರವು ಯೋಜನೆಯಲ್ಲಿ ಚಿಕ್ಕಚಿಕ್ಕ ವ್ಯವಹಾರಗಳ ವ್ಯವಸ್ಥೆಗೆ ಗ್ರಾಮಾಂತರ ಭಾಗಗಳಲ್ಲಿ ಜನತಾ ನ್ಯಾಯಾಲಯಗಳನ್ನು ಸ್ಥಾಪಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದೂ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದ ಶ್ರೀ ಭಗವತಿಯವರು ತಿಳಿಸಿದರು ಇಂಥಹ ನ್ಯಾಯಾಲಯಗಳು ಮಹಾರಾಷ್ಟ್ರದ ಥಾನಾ ಜಿಲ್ಲೆಯಲ್ಲಿ ಚೆನ್ನಾಗಿ ನಡೆಯುತ್ತಿರುವುದಾಗಿ ಹೇಳಿದರು.

★

ಕೇಪ್‌ಟೌನ್ ಬಿಟ್ಟು ನಿಂದ ನುಗ್ಗಾಟ

ಕೇಪ್‌ಟೌನ್ — ವರ್ಣೀಯ ಹಿಂಸಾಕೃತ್ಯಗಳು ನಗರದ ಶ್ವೇತಕೇಂದ್ರಕ್ಕೆ ಹರಡಿದ ನಂತರ ಸಹಸ್ರಗಟ್ಟಲೆ ಬೆರಕೆ ವರ್ಣ ಜನರಂಗದ ಯುವಕರು ಕೇಪ್‌ಟೌನ್‌ಗೆ ಶಿಪ್ಪಿನಿಂದ ನುಗ್ಗುತ್ತಿರುವುದಾಗಿ ವರದಿಯಾಗಿದೆ

ಭಾರಿ ನಾವು ನೋವು

ಬ್ರೆಜಿಲ್‌ನ ಒಂದು ನಗರದಲ್ಲಿ ಡೈನಾಮೈಟ್‌ನಿಂದ ತುಂಬಿದ್ದ ಟ್ರಕ್ ಉಡಾಯಿಸಲ್ಪಟ್ಟು ಡಜನ್‌ಗಟ್ಟಲೆ ಜನ ಸತ್ತು ನೂರು ಮಂದಿ ಗಾಯಗೊಂಡರು

○ ಗ್ರೀಸ್ ಪಟ್ಟಣವೊಂದರಲ್ಲಿ 7000 ವರ್ಷದ ಹಿಂದಿನ ಮಾನವನ ಅಸ್ಥಿ ಪಂಜರ ದೊರೆತಿದೆ

ತಿದ್ದುಪಡಿ ನಂ 1

ವಿಷಯ — ಟೆಂಡರ್ ಪ್ರಕಟಣೆ ನಂ. 18/76-77 ತಾ 24-7-76 ರಲ್ಲಿ ತಿಳಿಸಿರುವಂತೆ ಕೆ ಆರ್ ಬಿ ಸಿ ವೈಲಿ 1, 2, ಮತ್ತು 3 ರಲ್ಲಿ ನಾಲೆ ಬಿಡ್ ಮತ್ತು ಸೈಡ್ಸ್‌ಗೆ ಲೈನಿಂಗ್ ಒದಗಿಸುವುದು.

ರೆಫರೆನ್ಸ್ — 1 ಟಿ ಒ ಪತ್ರ ನಂ ಕೆಬಿಡಿ/ಡಿಬಿ2/ಕೆಆರ್‌ಬಿಸಿ ಟಿಎನ್‌ಡಿ 76-77/5986-6000, ತಾ 28-7-76.
2 ಟಿ ಒ ಪತ್ರ ನಂ ಕೆಬಿಡಿ/ಡಿಬಿ/ಟಿಎನ್‌ಡಿ 75-76/6155 ತಾ 30-7-76
3 ಕರ್ನಾಟಕ ಗೆಜೆಟ್ ತಾ 12-8-76 (ಪಿ ನಂ 698)

ಮೇಲ್ಕಂಡ ಪ್ರಕಟಣೆಯಲ್ಲಿ ಮಾಡಲಾಗಿರುವ ಭಾಗಶಃ ಬದಲಾವಣೆಯಲ್ಲಿ, ಈ ಕೆಳಗೆ ಕಂಡ ತಿದ್ದುಪಡಿಗಳನ್ನು ಸೇರಿಸುವುದು ಮತ್ತು ಪ್ರಕಟಣೆಯನ್ನು ಈ ಕೆಳಗೆ ಕಂಡಂತೆ ಓದುವುದು.

1 ಟೆಂಡರ್‌ಗೆ ಇಟ್ಟಿರುವ ಕೆಲಸದ ದರ ರೂ 24,59,546 ರ ಬದಲು ರೂ. 24,56,602

2 ಶೇಕಡ 1 ರಂತೆ ಇ ಎಂ ಡಿ ರೂ. 24,600ರ ಬದಲು ರೂ 24,570

3 ಟೆಂಡರ್‌ಗಳನ್ನು ಸ್ವೀಕರಿಸಲು ಕಡೆ ತಾರೀಖು 6-9-76 ರ ಬದಲು 22-9-76.

4 ಖಾಲಿ ಟೆಂಡರ್ ಫಾರಂಗಳನ್ನು ಕೊಡುವುದು 25-8-76 ರಿಂದ 31-8-76 ರ ಬದಲಿಗೆ 10-9-76 ರಿಂದ 15-9-76

ಸಹಿ/– ಎಕ್ಸಿಕ್ಯೂಟೀವ್ ಇಂಜಿನಿಯರ್
ಕೆ ಆ ವಿಭಾಗ, ಮೈಸೂರು – 2

ಸತ್ಯವಾದಿ 60 ನೇ ವರ್ಷಕ್ಕೆ

60 ನೇ ವರ್ಷಕ್ಕೆ ಪಾದಾರ್ಪಣ ಮಾಡಿರುವ ಮೈಸೂರಿನ "ಸತ್ಯವಾದಿ" ದಿನಪತ್ರಿಕೆ ಇನ್ನೂ ಚಿರಕಾಲ ಕನ್ನಡ ನಾಡಿಗೆ ಸೇವೆ ಸಲ್ಲಿಸಲಿ ಎಂದು ಹಾರೈಸುತ್ತೇವೆ

ಸಂಪಾದಕ ಗೆಳೆಯ ದಿನಪತ್ರಿಕೆ
ರಾಷ್ಟ್ರವಾಣಿ ವಾರಪತ್ರಿಕೆ
ಚಿಕ್ಕಮಗಳೂರು

ಮೇಲ್ಕಂಡಂತೆ ಪತ್ರಿಕೆಗಳ "ಗೆಳೆಯ" ದೈನಿಕದಲ್ಲಿ "ಸತ್ಯವಾದಿ"ಗೆ ಶುಭಾಶಯ ಪ್ರಕಟಣೆ ಮಾಡಿರುವ ಆ ಪತ್ರಿಕೆಯ ಸಂಪಾದಕರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳು

ಸಂಪಾದಕರು "ಸತ್ಯವಾದಿ"

ಪ್ರತಿಮೆ ಸಿಕ್ಕಿದೆ

ಜುನಾಘಡ — ಅಂಜಾರ್‌ನಲ್ಲಿ ಮನೆ ಕಟ್ಟಲು ಪಾಯ ತೋಡುತ್ತಿದ್ದಾಗ 7 ಅಡಿ ಎತ್ತರದ ಕ್ರಿ ಪೂ 25 ರ ಜೈನ ತೀರ್ಥಂಕರ ತೀರ್ಥಾಳನಾಥರವರ ಪ್ರತಿಮೆ ಸಿಕ್ಕಿದೆ.

○

ಕಪ್ಪು ಹಣ ಪತ್ತೆ

ಬೊಂಬಾಯಿ — ಇಲ್ಲಿಯ ಆದಾಯ ತೆರಿಗೆ ಅಧಿಕಾರಿಗಳು ಒಬ್ಬ ಚಲನಚಿತ್ರ ನಿರ್ಮಾಪಕ ಹಾಗೂ ಹೆಂಚಿಕೆದಾರನ ಮನೆಯನ್ನು ಶೋಧಿಸಿ 25 ಲಕ್ಷ ಹೊರ ಪಡಿಸದಿದ್ದ ಹಣ ವಶಪಡಿಸಿಕೊಂಡರು.

●

ಚುನಾವಣೆ ನಡೆಸಿಲ್ಲ

ನವ ದೆಹಲಿ — ಅನೇಕ ರಾಜ್ಯಗಳಲ್ಲಿ ಜಿಲ್ಲಾ ಪರಿಷತ್ ಹಾಗೂ ಗ್ರಾಮಪಂಚಾಯಿತಿ ಚುನಾವಣೆಯು ಹತ್ತು ವರ್ಷಗಳಿಂದ ನಡೆಸಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಹತ್ತು ಲಕ್ಷ ರೂಪಾಯಿಗಳ ವಶ

ಜಲಂಧರ — ಆದಾಯ ತೆರಿಗೆ ಅಧಿಕಾರಿಗಳು ನಡೆಸಿದ ಹನ್ನೆರಡು ಗಂಟೆಗಳ ದಾಳಿಯಲ್ಲಿ ಥಾನ್ಮೆ ವ್ಯಾಪಾರಿಗಳಿಂದ ರೂ 10 ಲಕ್ಷ ಲೆಕ್ಕ ಕೊಡದಿದ್ದ ಹಣ ಪತ್ತೆ ಆಗಿದೆ.

★

ಪಾಕೇಸ್ತಾನಕ್ಕೆ ವಿಮಾನಗಳು

ಲಂಡನ್ — ಪಾಕೇಸ್ತಾನವು ಫ್ರಾನ್ಸಿನಿಂದ ಫೈಟರ್ ವಿಮಾನಗಳು, ಹೆಲಿಕಾಪ್ಟರ್‌ಗಳು ಮುಂತಾದವನ್ನು ಕೊಳ್ಳಿತ್ತಿರುವುದಾಗಿ ವರದಿ ಆಗಿದೆ.

★

ಹೋಟಲನ್ನೇ ಆಡವಿಟ್ಟದ್ದ ಪ್ರಸಂಗ

ಶೃಂಗೇರಿ — ಬಡ ಜನರು ಹಾಗೂ ಪುರಸಭೆ ಕಾರ್ಮಿಕ ವರ್ಗದ ಗಿರವಿಯ ಒಡವೆಗಳನ್ನು ಅಧಿಕಾರಿಗಳು ಬಿಡಿಸಿಕೊಟ್ಟ ಸಂದರ್ಭದಲ್ಲಿ ಒಬ್ಬ ಹೋಟಲು ಮಾಲೀಕನು ತನ್ನ ಹೋಟಲನ್ನೇ ಮತ್ತೊಬ್ಬ ಹೋಟಲು ಮಾಲೀಕನಿಗೆ ಗಿರವಿ ಇಟ್ಟು ರೂ ಪತ್ತೆ ಆಗಿ ಸಾತ್ರೆರಗಡಿಗಳನ್ನು ವಶಪಡಿಸಿಕೊಂಡರು

For Holdalls, Kit Bags, & Suit Cases

ಹೋಲ್ಡ್ ಆಲ್, ಕಿಟ್ ಬ್ಯಾಗ್, ಸೂಟ್‌ಕೇಸುಗಳಿಗೆ

ಬ್ಯಾಂಕ್ ರೋಡ್ ಬಾಹು ಸಾರ್

Fair Price Shop in Actual Practice

ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ, ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

SHAKTI SUDHA

A Superb Tonic

ವುಡ್‌ಲಾಂಡ್ 3 9 76 ರಿಂದ

ಅಮೋಘ ಆರಂಭ

ದಸ್ ನಂಬರಿ

ಹಿಂದಿ ಕಲರ್

ಮನೋಜ್ ಕುಮಾರ್ ಹೇಮಮಾಲಿನಿ

ಪ್ರೇಮನಾಥ್ ಪ್ರಾಣ್ ಮುಂತಾದವರ ಅಭಿನಯ

ದಿನ 4 ಪ್ರದರ್ಶನಗಳು

ಅಪೇರಾ 3 9 76 ರಿಂದ

ಸೆಕ್ರೆಟರಿ

ಎ. ನಾಗೇಶ್ವರರಾವ್ ವಾಣಿಶ್ರೀ ಅಭಿನಯ

ತೆಲುಗು ಪ್ರತಿ ದಿನ 3 ಪ್ರದರ್ಶನಗಳು

'ಗೋರಕ್ಷಣ'ಕ್ಕೆ ಸಕಲ ನೆರವು ನೀಡಿ

ಗೋರಕ್ಷಣೆ, ಪ್ರಾಣಿದಯೆ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, "ಗೋರಕ್ಷಣ"ವು ತನ್ನ ಬೆಳ್ಳಿ ಹಬ್ಬ ನೆರವೇರಿಸಿರುವುದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೃಭಕ್ತರೂ, ಪ್ರಾಣಿದಯಾಸಂರಕ್ಷಕರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, 'ಗೋರಕ್ಷಣ"ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ.

'ಗೋರಕ್ಷಣ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4

Contribute Liberally to the National Defence Fund

Edited Printed and Published by Dharmapracharanirata M S Krishna Rao (Proprietor) at the Satyavadi Press, Chamarajapuram Mysore 4